ರಾಗ ಯೋಗ ಸುಧಾ ರಸ

ಡಾ.ರಮಾ ವಿ ಬೆಣ್ಣೂರ್

> ಉತ್ತಮ ಸಂಗೀತ ಕಛೇರಿಯೊಂದಿಗೆ ಆಚರಿಸಿಕೊಳ್ಳುತ್ತಿದ್ದ 'ರಾಗ'ವು ಈ ಬಾರಿ ರಾಗ-ಆಯುರ್ವೇದ-ಯೋಗವನ್ನು ಕುರಿತ ಸಂಗೀತ ಕಥಾ ಕಾಲಕ್ಷೇಪದ ಮೂಲಕ ಅದನ್ನು ವಿಭಿನ್ನವಾಗಿಸಿದ್ದು ವಿಶೇಷ.

RAAGA Music Academy [R] Mysore
"Music for Wellness"

ತನ್ನ ವಿಶಿಷ್ಟ ಉದ್ದೇಶವಾದ ಸಂಗೀತ ಆರೋಗ್ಯ ಮತ್ತು ಯೋಗವನ್ನು ಒಂದೇ ಸೂರಿನಡಿ ನೀಡುವುದರ ಮೂಲಕ ಅಪಾರ ಜನಪ್ರಿಯತೆಯನ್ನು ಗಳಿಸಿರುವ 'ರಾಗ ಮ್ಯೂಸಿಕ್ ಅಕಾಡೆಮಿ'ಯು ಇದೇ ಆಗಸ್ಟ್ 10ರಂದು ತನ್ನ ಐದನೆಯ ವಾರ್ಷಿಕೋತ್ಸವವನ್ನು ವಿಶಿಷ್ಟವಾಗಿಯೇ ಆಚರಿಸಿಕೊಂಡಿತು.

ಇದುವರೆಗೆ ಉತ್ತಮ ಸಂಗೀತ ಕಛೇರಿಯೊಂದಿಗೆ ಆಚರಿಸಿಕೊಳ್ಳುತ್ತಿದ್ದ 'ರಾಗ'ವು ಈ ಬಾರಿ ರಾಗ-ಆಯುರ್ವೇದ-ಯೋಗವನ್ನು ಕುರಿತ ಸಂಗೀತ ಕಥಾ ಕಾಲಕ್ಷೇಪದ ಮೂಲಕ ಅದನ್ನು ವಿಭಿನ್ನವಾಗಿಸಿತು. ಭಾರತದಲ್ಲಿ ಮತ್ತು ವಿದೇಶಗಳಲ್ಲಿ ತಮ್ಮ ಸಂಗೀತಮಯ ಉಪನ್ಯಾಸಗಳ ಮೂಲಕ ಅಪಾರ ಜನಪ್ರಿಯತೆಯನ್ನು ಗಳಿಸಿರುವ ವಿದುಷಿ ವಿಶಾಖ ಹರಿಯವರು ವಿಠಲರಂಗನ್(ಪಿಟೀಲು) ಮತ್ತು ತುಮಕೂರು ರವಿಶಂಕರ್(ಮೃದಂಗ) ಅವರೊಡನೆ ಇದನ್ನು ನಡೆಸಿಕೊಟ್ಟರು.

ವಿದ್ವಾನ್ ಲಾಲ್ಗುಡಿ ಜಯರಾಮನ್ ಅವರ ಗರಡಿಯಲ್ಲಿ ತಯಾರಾಗಿರುವ ಅವರಲ್ಲಿ ಗಟ್ಟಿಯಾದ ಸಂಗೀತದ ಅಡಿಪಾಯವಿದೆ. ಭಾರತೀಯ ಸಂಸ್ಕೃತಿಯನ್ನು ಹಾಗೂ ಪರಂಪರೆಯನ್ನು ಕುರಿತಂತೆ ಮಾಡಿರುವ ವ್ಯಾಪಕ ಅಧ್ಯಯನದ ಬೆಂಬಲವಿದೆ. ಇದಕ್ಕೆ ಪುಟವಿಟ್ಟಂತೆ ನಿರರ್ಗಳ ವಾಕ್ಚರಿಯೂ ಇದೆ. ಇದೆಲ್ಲವೂ ವಿಶಾಖ ಹರಿಯವರಲ್ಲಿ ಮುಪ್ಪುರಿಗೊಂಡು ಇಂದಿನ ಸಮಾಜಕ್ಕೆ ಭಾರತದ ಸಾಂಸ್ಕೃತಿಕ ಶ್ರೀಮಂತಿಕೆಯನ್ನು ಇಂಗ್ಲೀಷ್ ಭಾಷೆಯಲ್ಲಿ ಪರಿಚಯಿಸುವ ಕಾರ್ಯವು ಕೇಳುಗರ ಮನವನ್ನು ಆಕರ್ಷಿಸುವಂತೆ ನಿರಂತರವಾಗಿ ನಡೆಯುತ್ತಲೇ ಇದೆ. ಅಂದು ಅವರು ಆಯ್ಕೆ ಮಾಡಿಕೊಂಡ ವಿಷಯ 'ರಾಗ ಸುಧಾರಸ'- ಭಾರತೀಯ ಸಂಸ್ಕೃತಿಯಲ್ಲಿ ಸಂಗೀತ-ಆಯುರ್ವೇದ ಮತ್ತು ಯೋಗಗಳನ್ನು ಕುರಿತದ್ದು. ಅದನ್ನು ಸಂಗೀತ ರಚನೆಗಳಲ್ಲಿ ಅಡಕವಾಗಿರುವ ಉಲ್ಲೇಖಗಳ ಮೂಲಕವೇ ತೋರುತ್ತಾ ಕೇಳುಗರಿಗೆ ಈ ಮೂರರಲ್ಲಿರುವ ಸಾಮ್ಯತೆಯನ್ನು, ಹಾದಿ ಬೇರೆಯಾದರೂ ಇರುವ ಒಂದೇ ಗುರಿಯನ್ನು ಸೊಗಸಾಗಿ ಪರಿಚಯಿಸಿದರು. ಈ ಮೂರೂ ವಿದ್ಯೆಗಳ ಗುರಿ ಭಗವಂತನ ಸಾಕ್ಷಾತ್ಕಾರ. ನಾದ-ಸುಧಾರಸಗಳಿಂದ ನಮ್ಮ ಜೀವಿತದ ವರುಷಗಳಿಗೆ ಜೀವ ತುಂಬಲು ಭಾರತೀಯ ಸಂಸ್ಕೃತಿಯಲ್ಲಿ ಮಾತ್ರ ಸಾಧ್ಯವೆಂದರು.

ನಾದದ ಮೂಲಕ ವಿರಾಟ್‌ಪುರುಷನ ಇರುವಿಕೆಯನ್ನು ಅರಿಯಲು ಸಾಧ್ಯ ಎಂಬುದನ್ನು ತ್ಯಾಗರಾಜರ 'ದುಡುಕುಗಲ'ದಿಂದ ವಿವರಿಸಿದರು. ಆ 'ಪರಮಾನಂದ'ವನ್ನು ಅನುಭವಿಸಲು ಬೇಕಾದ ಸ್ವಚ್ಛ ಮನಸ್ಸನ್ನು ಆವರಿಸಿರುವ ಅರಿಷಡ್ವರ್ಗಗಳನ್ನು ನಿವಾರಿಸುವುದೇ 'ರಾಗ'. ನಿಮ್ಮೊಳಗಿನ ಜ್ಞಾನವನ್ನು ಯೋಗದ ಶಕ್ತಿಯಿಂದ ಕಾಣಬಹುದು, ಪ್ರಾಣ ಮತ್ತು ಅನಲದ ಸಂಯೋಗದಿಂದ ಸೂಕ್ಷ್ಮ ಶರೀರವು ನಾದದ ಮೂಲಕ ಸಾಕ್ಷಾತ್ಕಾರವನ್ನು ಪಡೆಯುತ್ತದೆ ಎಂಬ ತ್ಯಾಗರಾಜರ 'ಮೋಕ್ಷಮುಗಲದಾ' ಕೃತಿಯಲ್ಲಿ ಅಡಗಿರುವ ರಹಸ್ಯವನ್ನು ತೆರೆದಿಟ್ಟರು.

ಪ್ರಾಣ ಮತ್ತು ಅನಲಗಳ ಸಂಯೋಗದಿಂದ ಹೊರಡುವ ಓಂಕಾರದಿಂದ ಸಪ್ತಸ್ವರಗಳು ಹುಟ್ಟುತ್ತವೆ ಎಂದು ರಾಗದ(ಸಂಗೀತ) ಮಹತ್ವವನ್ನು ವಿವರಿಸಿ ವಿಶಾಖ ಅವರು ಆಯುರ್ವೇದವು ಹೇಗೆ ಸಮುದ್ರ ಮಂಥನದ ಸಮಯದಲ್ಲಿ ಹುಟ್ಟಿತು, ಧನ್ವಂತರಿಯೇ ಆಯುರ್ವೇದದ ದೇವತೆ ಎಂಬುದನ್ನು ಭಾಗವತದಲ್ಲಿ ಉಲ್ಲೇಖಿತವಾದ ಸಮುದ್ರ ಮಂಥನದೊಡನೆ ಸವಿಸ್ತಾರವಾಗಿ ವಿವರಿಸಿದರು. ಅಮರತ್ವವನ್ನು ಪಡೆಯಲು ದೇವ ದಾನವರು ಎಲ್ಲ 'ಓಷಧಿ'ಗಳನ್ನು ಹಾಕಿ, ಮಂದರ ಪರ್ವತವನ್ನು ಕಡೆಗೋಲನ್ನಾಗಿಸಿ, ವಾಸುಕಿಯನ್ನು ಹಗ್ಗವನ್ನಾಗಿಸಿ ಕಡೆದರೂ ಕೊನೆಗೆ 'ಅಜಿತ'ನಾಮಕ ಮಹಾವಿಷ್ಣುವಿನ ಕೃಪೆಯಿಂದ ಮಾತ್ರ ಅವರುಗಳ ಅಹಂಕಾರ ಅಳಿದು, ಅಮೃತವು ದೊರಕಿತೆಂಬುದನ್ನು ರಸವತ್ತಾಗಿ ವಿವರಿಸಿದರು. ಅದರ ಸಾರವೇನೆಂದರೆ ಮನುಷ್ಯರು ದೇಹವನ್ನೇ ಕಡಲಾಗಿಸಿ, ನಮ್ಮ ನಾಡಿಗಳನ್ನು ವಾಸುಕಿಯಾಗಿಸಿ, ಬೆನ್ನುಹುರಿಯೆಂಬ ಮಂದರದಿಂದ ನಮ್ಮ ಮನಸ್ಸನ್ನು ಕಡೆಯಬೇಕು, ಆಗ ನಮ್ಮ ಅಹಂಕಾರ ಅಳಿದು, ಸಾಕ್ಷಾತ್ಕಾರ ಆಗುತ್ತದೆ.

ವಿಶಾಖ ಹರಿಯವರ ಕಥಾ ಕಾಲಕ್ಷೇಪದಲ್ಲಿ ಆಲಾಪನೆ, ಕಲ್ಪನಾ ಸ್ವರ, ನೆರವಲ್, ತಾನ, ಕೀರ್ತನೆ ಮುಂತಾದ ಸಂಗೀತದ ಎಲ್ಲ ಅಂಶಗಳೂ ಇವೆ. ಕೀರ್ತನೆಗಳ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ್ದಾರೆ. ಜೊತೆಗೆ ಸ್ವಾರಸ್ಯಕರ ಮಾತುಗಳಿವೆ. ರಾಮಾಯಣ, ಮಹಾಭಾರತ, ಭಾಗವತದ ವಿಷಯಗಳನ್ನು ಆಯ್ದು, ಸಮಕಾಲೀನ ಬದುಕಿಗೆ ಸಮನ್ವಯಿಸುವ ಜಾಣ್ಮೆ ಇದೆ. ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಗಾಢವಾದ ಅಭಿಮಾನವು ಪ್ರತೀ ಮಾತಿನಲ್ಲೂ ವ್ಯಕ್ತವಾಗುತ್ತದೆ. ಆಧುನಿಕ ಕಾಲಕ್ಕೆ ತಕ್ಕಂತೆ ಇವೆಲ್ಲವೂ ಇಂಗ್ಲೀಷಿನಲ್ಲಿ ವ್ಯಕ್ತಗೊಳ್ಳುವುದು ಎಲ್ಲ ವಯಸ್ಸಿನವರಿಗೂ ತಲುಪಲು ಸಹಾಯ ಮಾಡುತ್ತದೆ. ಒಟ್ಟಾರೆ ಅದೊಂದು ಸತ್ಸಂಗ ಎಂಬುದರಲ್ಲಿ ಎರಡು ಮಾತಿಲ್ಲ.

ತ್ಯಾಗದೊಂದಿಗಿನ ಭೋಗವೇ ಯೋಗ್ಯ

ಡಾ. ಕೆ.ಎಸ್. ಕಣ್ಣನ್

ನಾವೆಲ್ಲರೂ ಸದಾ ಏನಾದರೂ ಮಾಡುತ್ತಲೇ ಇರುತ್ತೇವೆ. ಸುಮ್ಮನೇ ಇರಲಾದೀತೆ? ಎಲ್ಲವನ್ನೂ ಏಕೆ ಮಾಡುತ್ತೇವೆ? – ಎಂಬ ಪ್ರಶ್ನೆಗೆ ಉತ್ತರವೇ? ದಾಸರೇ ಕೊಟ್ಟಿದ್ದಾರೆ: 'ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ'. ಯಾರ ಹೊಟ್ಟೆ-ಬಟ್ಟೆಗಳಿಗಾಗಿ? ನಮ್ಮವಕ್ಕೇ ತಾನೆ? ಬರೀ ತನ್ನ ಹೊಟ್ಟೆ–ಬಟ್ಟೆಗಳಿಗಾಗಿಯೇ? ಮನೆಯ ಯಜಮಾನನೆಂದರೆ ಮನೆಯ ಮಂದಿಯ ಎಲ್ಲರ ಹೊಟ್ಟೆ-ಬಟ್ಟೆಗಳಿಗಾಗಿಯೂ ಮಾಡುವವನೇ. ಬರೀ ತನಗೋ? 'ಸ್ವಾರ್ಥಿ' ಎನ್ನುತ್ತಾರೆ! ಬೈಗಳ ತಪ್ಪಿಸಿಕೊಳ್ಳಲಾದರೂ ಕೊಟ್ಟು ತಿನ್ನಬೇಕು!

ಹಣಕ್ಕೆ ಮೂರೇ 'ಗತಿ'ಗಳಂತೆ. ದಾನವೊಂದು, ಭೋಗವೊಂದು. ಮೂರನೆಯದೇ ನಾಶ. ಅನ್ಯರಿಗೆ ಕೊಡಲಿಲ್ಲ. ತಾನೂ ತಿನ್ನಲಿಲ್ಲ – ಎಂದಾದಲ್ಲಿ ಅಂತಹ ಗಳಿಕೆಗೆ 'ನಾಶ'ವೇ ಗತಿ. ಯಾರಿಗೋ ಹೋಯಿತು: ದುರ್ಗತಿಯೇ! ನಾವು ಪ್ರಗತಿಯನ್ನು ಕಾಣಬೇಕೆಂದರೆ ಕೊಟ್ಟು ಸಂತೋಷಿಸಬೇಕು. ಬಾಯಿಗೆ ಅನ್ನ ಹಾಕಿದೆವು, 'ತನಗೇ ಎಲ್ಲ' ಎಂದು ಬಾಯಿ ಹೇಳುತ್ತದೆಯೇ? ಅದನ್ನು ಹೊಟ್ಟೆಗೆ ಕಳುಹಿಸುತ್ತದೆ. 'ತನ್ನಲ್ಲೇ ಎಲ್ಲ ಇರಲಿ' ಎಂದು ಹೊಟ್ಟೆ ಇಟ್ಟುಕೊಂಡರೆ, ಡಾಕ್ಟರ ಬಳಿ ಹೋಗಿ 'ಹೊಟ್ಟೆ ಕೆಟ್ಟಿದೆ' ಎನ್ನುತ್ತೇವೆ! ಪಚನ ಮಾಡಿ ಆಹಾರದ ಸಾರವನ್ನು ಇಡೀ ಶರೀರಕ್ಕೇ ಹೊಟ್ಟೆ ಕಳುಹಿಸುವುದಲ್ಲವೆ?: ಎಲ್ಲ ಅಂಗಗಳೂ ಚೆನ್ನಾಗಿದ್ದೇ ತಾನೂ ಚೆನ್ನಾಗಿರುವುದು. ಶ್ರೀರಂಗಮಹಾಗುರುಗಳು ಬೀಜದ ಉದಾಹರಣೆಯನ್ನು ಕೊಡುತ್ತಿದ್ದರು. ಕ್ಷೇತ್ರದಲ್ಲಿ ಬಿದ್ದ ಬೀಜವು ತನ್ನನ್ನೇ ಮುಂದಿನದಕ್ಕೆ ಕೊಟ್ಟುಕೊಳ್ಳುತ್ತದೆ. ಮುಂದಿನದೂ ಕೊಟ್ಟುಕೊಂಡೇ ಬೇರು, ಕಾಂಡ, ಕೊಂಬೆ, ಚಿಗುರು, ಎಲೆ, ಹೂವು, ಹಣ್ಣುಗಳಾಗಿ ವೃಕ್ಷವಾಗುವುದು. ಫಲ ಬಿಟ್ಟಾಗಲೇ ಅಲ್ಲವೆ, ಸ-ಫಲ-ತೆ? 'ಕೊಟ್ಟರೆ ಹೋಯಿತು!' ಎಂಬುದಲ್ಲ, 'ಕೊಟ್ಟದ್ದು ತನಗೆ' ಎಂಬುದು ನೀತಿ: ವಿಚಿತ್ರವಾದ ಸತ್ಯವಿದು. 'ಓ, ಹಾಗಾದರೆ ನನಗೇ ಬರಲೆಂದೇ ಕೊಡುತ್ತೇನೆ' ಎಂಬ ಸಂಕಲ್ಪವೂ ಸರಿಯಲ್ಲ! ತ್ಯಾಗವನ್ನೂ ಮಾಡಬೇಕು, ಭೋಗವನ್ನೂ ಪಡಬೇಕು. ಆದರೂ ಭೋಗಿಸಿ ತ್ಯಾಗವಲ್ಲ, ತ್ಯಾಗಿಸಿ ಭೋಗ. ಈಶಾವಾಸ್ಯೋಪನಿಷತ್ತು ಅದನ್ನು 'ತೇನ ತ್ಯಕ್ತೇನ ಭುಂಜೀಥಾಃ ' ಎನ್ನುತ್ತದೆ. 'ಜಗತ್ತಿನಲ್ಲಿಯ ಚರಾಚರವೆಲ್ಲವೂ ಈಶನಿಂದ ವ್ಯಾಪ್ತ. ಮತ್ತೊಬ್ಬರ ಸೊತ್ತಿಗಾಗಿ ಹಂಬಲಿಸೀಯೆ!' ಎಂದು ಎಚ್ಚರಿಸುತ್ತದೆ. ನಮಗೆ ದೊರೆತದ್ದೂ ಬೇರೆಯವರು ಕೊಟ್ಟದ್ದರಿಂದ, ಉಳ್ಳವರು ಕೊಟ್ಟದ್ದರಿಂದಲೇ. ಎಲ್ಲವನ್ನೂ ಉಳ್ಳವನು, ಎಲ್ಲಕ್ಕೂ ಸ್ವಾಮಿಯೆಂದರೆ ಈಶನೇ. ಆ ಸ್ಮರಣೆಯಿರಬೇಕು. ದುಡಿದು ಸಂಪಾದಿಸಬೇಕು. ಹಂಚಿ ತಿನ್ನಬೇಕು: ತ್ಯಾಗಪೂರ್ವಕ ಭೋಗ. ಇಲ್ಲಿಯೇ ಇರುವುದು ಸ್ವಸುಖ-ಪರಸುಖ. ಕ್ರಮವರಿತು ಕೊಟ್ಟರಲ್ಲವೆ ಸುಖ? ಪುಟ್ಟ ಉಪನಿಷತ್ತಿನ ಮೊಟ್ಟಮೊದಲ ಮಂತ್ರ ಸಫಲತೆಯ ಸೂತ್ರ.

ಕುಂದು ಕೊರತೆ

ಅಪಾಯಕ್ಕೂ ಮುನ್ನ ಹೊಂಡ ಮುಚ್ಚಿಸಿ



ರಾಮಸ್ವಾಮಿ ಸರ್ಕಲ್ ಸಿಗ್ನಲ್ ಗುಂಡಿ ಬಿದ್ದು ಹಲವು ತಿಂಗಳು ಕಳೆದಿವೆ. ಮಳೆನೀರಿನಿಂದ ವಾಹನ ಸವಾರರಿಗೆ ಸಂಕಷ್ಟ ಉಂಟಾಗುತ್ತಿದ್ದು, ಸಂಬಂಧಪಟ್ಟವರು ಕೂಡಲೇ ಗಮನಹರಿಸಲಿ

ರಮೇಶ, ಕೃಷ್ಣಮೂರ್ತಿಪುರಂ

'ಮರದ ಕಾಂಡ ತೆರವುಗೊಳಿಸಿ'



ಬಲ್ಲಾಳ ಸರ್ಕಲ್‌ನ ಮೈಸೂರು ಅನಂತಸ್ವಾಮಿ ಉದ್ಯಾನದ ಪಕ್ಕದಲ್ಲಿ ಪಾದಚಾರಿ ರಸ್ತೆಗೆ ಸರಿಯಾಗಿ ಟೈಲ್ಸ್ ಹಾಕಿಲ್ಲ. ಇದರಿಂದ ರಾತ್ರಿ ವೇಳೆ ಇಲ್ಲಿ ಸಂಚರಿಸುವವರು ಎಡವಿಬೀಳುವ ಅಪಾಯವಿದ್ದು, ಓಡಾಡುವವರಿಗೆ ತೊಂದರೆ ಉಂಟಾಗಿದೆ. ಸಂಬಂಧಪಟ್ಟವರು ತಕ್ಷಣವೇ ಈ ಬಗ್ಗೆ ಗಮನಹರಿಸಿ ಸಮಸ್ಯೆ ಬಗೆಹರಿಸಬೇಕು

ನಿವಾಸಿಗಳು, ಬಲ್ಲಾಳ ಸರ್ಕಲ್



'ಕಾಲಕಾಲಕ್ಕೆ ಸ್ವಚ್ಛವಾಗಲಿ'

ಸಾಂಸ್ಕೃತಿಕ ನಗರಿ ಎಂಬ ಹಣೆ ಪಟ್ಟಿಯನ್ನು ಹೊಂದಿರುವ ಮೈಸೂರು ಸ್ವಚ್ಛತೆಗೆ ಹೆಸರಾಗಿದೆ. ಆದರೆ ಖಾಲಿ ನಿವೇಶನಗಳ ಸ್ಥಳಗಳಲ್ಲಿ ಗಿಡ ಗಿಂಟಿ ಬೆಳೆದು ದಿನ ನಿತ್ಯ ಸ್ಥಳೀಯರಿಗೆ ಓಡಾಡಲು ಕಿರಿಕಿರಿ ಆಗುತ್ತಿದೆ. ಆದ್ದರಿಂದ ಪಾಲಿಕೆ, ಅಧಿಕಾರಿಗಳು, ಸಾರ್ವಜನಿಕರು, ಮಾಲೀಕರು ಎಲ್ಲರೂ ಸೇರಿ ಕಾಲ ಕಾಲಕ್ಕೆ ಸ್ವಚ್ಛತೆಗೆ ಒತ್ತು ನೀಡಬೇಕು ಇದರಿಂದ ಸ್ಥಳಗಳು ಸ್ವಚ್ಛವಾಗುತ್ತವೆ.

ರಂಜನ್ ಪಿ.ಎಸ್, ಪತ್ರಿಕೋದ್ಯಮ ವಿಭಾಗ, ಸಂತ ಫಿಲೋಮಿನಾ ಕಾಲೇಜು ಮೈಸೂರು

ಮಕ್ಕಳ ಆಟಿಕೆ ದುರಸ್ತಿ ಎಂದು ?

ನ್ಯಾಯಾಲಯದ ಎದುರುಗಡೆ ಇರುವ ವಾಣಿವಿಲಾಸ್ ಜೋಡಿ ರಸ್ತೆಯ ಮನುವನ ಪಾರ್ಕ್‌ನಲ್ಲಿ ಮಕ್ಕಳು ಆಡುವ ಉಯ್ಯಾಲೆ, ಆನೆ, ಮುರಿದುಬಿದ್ದಿದ್ದು, ದುರಸ್ತಿ ಕಂಡಿಲ್ಲ. ಹೀಗಾಗಿ, ಹಲವು ತಿಂಗಳಿಂದ ಈ ಪಾರ್ಕ್‌ಗೆ ಬರುವ ಮಕ್ಕಳಿಗೆ ಆಟದ ಭಾಗ್ಯ ಇಲ್ಲ. ಆದಷ್ಟು ಬೇಗ ಪಾಲಿಕೆಯವರು ಇವುಗಳನ್ನು ದುರಸ್ತಿ ಮಾಡಲಿ

ಭಾರತಿ, ಚಾಮರಾಜಪುರಂ ನಿವಾಸಿ

ಚಪ್ಪಡಿ ಕಲ್ಲು ತೆರವುಗೊಳಿಸಿ



ಬಲ್ಲಾಳ್ ಸರ್ಕಲ್‌ನಿಂದ ಅಶೋಕಪುರಂನ ಕಡೆಗೆ ತೆರಳುವ ಪಾದಚಾರಿ ರಸ್ತೆಯಲ್ಲಿ ಚಪ್ಪಡಿ ಕಲ್ಲು ಹಾಗೇ ಉಳಿದಿದೆ. ಈ ಮಾರ್ಗದಲ್ಲಿ ತೆರಳುವ ಯುವಕರು, ವೃದ್ದರು ಎಡವಿಬಿದ್ದು, ಪೆಟ್ಟು ಮಾಡಿಕೊಳ್ಳುವ ಸಾಧ್ಯತೆಗಳಿವೆ. ಅಪಾಯಕ್ಕೂ ಮುನ್ನ ಇಲ್ಲಿರುವ ಕಲ್ಲುಗಳನ್ನು ತೆರವುಗೊಳಿಸಿ

ನಿವಾಸಿಗಳು, ಬಲ್ಲಾಳ ಸರ್ಕಲ್

ಮುನ್ನೋಟ

ವಚನ ಪ್ರವಚನ

ಬಸವಜ್ಞಾನ ಮಂದಿರ ವತಿಯಿಂದ ಶ್ರಾವಣಮಾಸದ ಪೂಜಾನುಷ್ಠಾನ ಹಾಗೂ ವಿಶ್ವಧರ್ಮ ವಚನ ಪ್ರವಚನ ಕಾರ್ಯಕ್ರಮದ ಅಂಗವಾಗಿ ಆ.13ರಂದು ಶರಣರ ಮಾನವೀಯ ಮೌಲ್ಯಗಳ ಕುರಿತು ಡಾ.ಜಯಪ್ಪ ಹೊನ್ನಾಳಿ ಪ್ರವಚನ ನೀಡಲಿದ್ದಾರೆ. ಆ.14ರಂದು ಶಿವಶರಣೆಯರ ಕೊಡುಗೆ ಕುರಿತು ಡಾ.ಸುನಂದ ಬೂಪಾಳಿ ಪ್ರವಚನ ನೀಡಲಿದ್ದಾರೆ. ಆ.15ರಂದು ವಚನಗಳಲ್ಲಿ ಕಲಾ ವೈಭವದ ಕುರಿತು ಡಾ.ಮಂಟೇಲಿಂಗಾಚಾರ್ ಪ್ರವಚನ ನೀಡಲಿದ್ದಾರೆ. ಆ.16ರಂದು ಮಾದಾರ ಚನ್ನಯ್ಯ ಕುರಿತು ಎಂ.ಚಂದ್ರಶೇಖರ್ ಪ್ರವಚನ ನೀಡಲಿದ್ದಾರೆ.

ಸ್ಥಳ: ಬಸವಜ್ಞಾನ ಮಂದಿರ, ಮುನೇಶ್ವರ ನಗರ, ಪ್ರತಿದಿನ ಸಂಜೆ 5.

ಚಾತುರ್ಮಾಸ್ಯ ವಿಶೇಷ

ಶ್ರೀಕೃಷ್ಣಧಾಮ ವತಿಯಿಂದ ವಿಶ್ವೇಶತೀರ್ಥರ 81ನೇ, ವಿಶ್ವಪ್ರಸನ್ನತೀರ್ಥರ 32ನೇ ಚಾತುರ್ಮಾಸ್ಯ ನಿಮಿತ್ತ ಆ.13ರಂದು ಚಂದನ್ ಮತ್ತು ಸಂಗಡಿಗರಿಂದ ಕೊಳಲುವಾದನ. ರಾತ್ರಿ 7ರಿಂದ 9ರತನಕ 'ಖಾಂಡವ ದಹನ ಯಕ್ಷಗಾನ' ಆ.14ರಂದು ಕನಕದಾಸರ ದಾಸರ ವೈಭವ ಕುರಿತು ಗಾನಸಿರಿ– ವೇದಾಂತ ಲಹರಿ ಕುರಿತು ಖೇಡ ವೇದವ್ಯಾಸಾಚಾರ್ಯ ವಿಶ್ಲೇಷಣೆ ಮಾಡುವರು. ಗಾಯನ– ಪೂರ್ಣಿಮಾ ಭಟ್, ದಿವ್ಯಾ ಸಾಚಿ. ಆ.15ರಂದು ಪುರಂದರದಾಸರ ವೈಭವ ಕುರಿತು ಗಾನಸಿರಿ– ವೇದಾಂತ ಲಹರಿ ಕುರಿತು ಹರಿದಾಸ ಭಟ್ ವಿಶ್ಲೇಷಣೆ ಮಾಡುವರು. ಗಾಯನ– ನಂದಿನಿ ರಾವ್. ಆ.16ರಂದು 'ದಾಸಾಂಜಲಿ' ಕಾರ್ಯಕ್ರಮ, ಗಾಯನ– ಸುಮಂತ್ ವಸಿಷ್ಠ, ನಿತ್ಯಶ್ರೀ, ಪ್ರಜ್ಞಾ ರಾವ್. ರಾಯರ ಮಹಿಮೆ ಕುರಿತು ಪ್ರದ್ಯುಮ್ನಾಚಾರ್ಯ ಪ್ರವಚನ ನೀಡುವರು(ಸಂಜೆ 7).

ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ ಪ್ರತಿದಿನ ಸಂಜೆ 5

ಶ್ರಾವಣಮಾಸ ವಾರ್ಷಿಕೋತ್ಸವ

ಶನೇಶ್ವರಸ್ವಾಮಿ ಭಕ್ತಮಂಡಲಿ ವತಿಯಿಂದ 42ನೇ ಶ್ರಾವಣಮಾಸ ವಾರ್ಷಿಕೋತ್ಸವ ಅಂಗವಾಗಿ ದೇವರ ಕೀರ್ತನೆ ಮಾಲಿನಿ ಮತ್ತು ತಂಡದಿಂದ . ಆ.13ರಂದು ಗಾನಸಿರಿ ತಂಡದ ಯಶ್ವಂತ್‌ಕುಮಾರ್‌ರಿಂದ 'ಸುಗಮ ಸಂಗೀತ'. ಆ.14ರಂದು ಕಾಳಿದಾಸ, ತಂಡದಿಂದ ಹರಿಕಥೆ. ಆ.15 ದಿವ್ಯಶ್ರೀ ಕನ್ನಡ ಕಲಾಸಂಘದ ರೇಖಾದಾಸ್, ಜೂನಿಯರ್ ವಿಷ್ಣುವರ್ಧನ್ ತಂಡದಿಂದ ನಾಟಕ ಪ್ರದರ್ಶನ. ಆ.16 ಅಕ್ಷತಾ ಮೆಲೋಡಿಸ್ ತಂಡದಿಂದ 'ಸುಗಮ ಸಂಗೀತ' ಕಾರ್ಯಕ್ರಮ ನಡೆಯಲಿದೆ.

ಸ್ಥಳ: ಶನೇಶ್ವರಸ್ವಾಮಿ ಭಕ್ತಮಂಡಲಿ, ರಾಜೇಂದ್ರನಗರ, ಪ್ರತಿ ದಿನ ಸಂಜೆ 7

ಯಕ್ಷಸಂಭ್ರಮ ಕಾರ್ಯಕ್ರಮ

ಇನೊವೇಟಿವ್ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿಯಾಗಿ ಯಕ್ಷಸಂಭ್ರಮ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಾರ್ಯಕ್ರಮದಲ್ಲಿ ತಾಳಮದ್ದಳೆ ಯಕ್ಷಗಾನ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಕೃಷ್ಣಮೂರ್ತಿಪುರಂನ ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಮಹಿಳಾ ಮಹಾವಿದ್ಯಾಲಯ ಸಭಾಂಗಣ, ಆ.13ರ ಬೆಳಿಗ್ಗೆ 10.30ಕ್ಕೆ

ಕಾರ್ಯಕ್ರಮ

ಸುಷಿರ ವಿ.ದೇಶಿ-ಕಾಚಾರ್ಸ್ ಅಕಾಡೆಮಿ ಆಫ್ ಮ್ಯೂಸಿಕ್‌ನ 19ನೇ ವಾರ್ಷಿಕೋತ್ಸವದ ಅಂಗವಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಆ.13ರಂದು ವಿದುಷಿ ಎಸ್.ಜೆ.ನಂದಿನಿ ಗಾಯನ ಮಾಡಲಿದ್ದು, ಎಚ್.ಎಸ್.ಭಾಸ್ಕರ್ ಪಿಟೀಲು, ಆನೂರು ಆರ್.ಅನಂತ ಕೃಷ್ಣಶರ್ಮ ಮೃದಂಗ, ಸುನಾದ್ ಆನೂರು ಖಂಜಿರ ಸಾಥ್ ನೀಡಲಿದ್ದಾರೆ. ಆ.14ರಂದು ನಾಗಸ್ವರ ವಿದ್ವಾನ್ ಮೇಲುಕೋಟೆ ಎಂ.ಜಿ.ಶ್ರೀಧರ ಹಾಗೂ ತಂಡವು ನಾದಸ್ವರ ಪ್ರಸ್ತುತಪಡಿಸಲಿದೆ. ಆ.15ರಂದು ವಿದ್ವಾನ್ ವಿವೇಕ್ ಮೋಜಿಕುಲಮ್ ಗಾಯನ ಮಾಡಲಿದ್ದು, ಬಿ.ಕೆ.ರಘು ಪಿಟೀಲು, ಬಿ.ಸಿ.ಮಂಜುನಾಥ್ ಮೃದಂಗ, ಎಸ್.ರಾಘವೇಂದ್ರ ಪ್ರಕಾಶ್ ಘಟಂ ಸಾಥ್ ನೀಡಲಿದ್ದಾರೆ. ಆ.16ರಂದು ಹೇರಂಭ್, ಹೇಮಂತ್‌ರಿಂದ ದ್ವಂದ್ವ ವೇಣು ವಾದನ ನುಡಿಸಲಿದ್ದು, ಮತ್ತೂರು ಆರ್.ಶ್ರೀನಿಧಿ ಪಿಟೀಲು, ತುಮಕೂರು ಬಿ.ರವಿಶಂಕರ್ ಮೃದಂಗ, ಶರತ್ ಕೌಶಿಕ್ ಘಟಂನ ಸಹಕಾರ ನೀಡಲಿದ್ದಾರೆ.

ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆ.ಎಲ್.ಬಿ ರಸ್ತೆ, ಲಕ್ಷ್ಮೀಪುರಂ, ಪ್ರತಿದಿನ ಸಂಜೆ 6.15.

ನಾಟಕ ಪ್ರದರ್ಶನ

ಸೇಪಿಯೆಂಟ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ವಿದ್ಯಾರ್ಥಿ ನಾಟಕ ಸಂಘದ 'ರಂಗಕಹಳೆ' ತಂಡದಿಂದ 'ಜತೆಗಿರುವನು ಚಂದಿರ' ಎಂಬ ನಾಟಕ ಪ್ರದರ್ಶನವನ್ನು ಏರ್ಪಡಿಸಿದೆ.

ಸ್ಥಳ: ಕಿರುರಂಗಮಂದಿರ, ಆ.13ರ ಸಂಜೆ 6ಕ್ಕೆ

ಆರಾಧನಾ ಮಹೋತ್ಸವ

ಗುರುರಾಘವೇಂದ್ರ ಆರಾಧನಾ ಸಮಿತಿ ವತಿಯಿಂದ ಗುರುರಾಘವೇಂದ್ರ ಸ್ವಾಮಿಯ 348ನೇ ವರ್ಷದ ಆರಾಧನಾ ಮಹೋತ್ಸವ ಪ್ರಯುಕ್ತ ವಾಹನೋತ್ಸವವನ್ನು ಆಯೋಜಿಸಲಾಗಿದೆ.

ಸ್ಥಳ: ಆ. 16ರಿಂದ– 'ಸಾರ್ವಭೌಮ' 3ನೇ ಬ್ಲಾಕ್, ದಟ್ಟಗಳ್ಳಿ 3ನೇ ಹಂತ

ವಾದ್ಯಸಂಗಮ

ಅಜ್ಜನ ಮನೆ ಕಲಾ ಪ್ರಪಂಚ ವತಿಯಿಂದ ಆ.15ರಂದು 60 ಯುವ ಕಲಾವಿದರಿಂದ ನಿರಂತರ 5 ಗಂಟೆಗಳ ಕಾಲ ವಾದ್ಯ ಸಂಗಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸ್ಥಳ: ಗಾನಭಾರತಿ ಸಭಾಂಗಣ, ಕುವೆಂಪುನಗರ, ಮಧ್ಯಾಹ್ನ 3

ಸಾಯಿಬಾಬಾ ಪ್ರತಿಷ್ಠಾಪನೆ

ದತ್ತಾತ್ರೇಯ ಸ್ವಾಮಿ ದೇವಸ್ಥಾನ ಟ್ರಸ್ಟ್ ವತಿಯಿಂದ ಮಂಡಿಮೊಹಲ್ಲಾದ ದತ್ತಾತ್ರೇಯ ಸ್ವಾಮಿ ದೇವಸ್ಥಾನದಲ್ಲಿ ಆ.14ರಂದು ಶ್ರೀ ದತ್ತ ಸಾಯಿಬಾಬಾರ ಪ್ರತಿಷ್ಠಾಪನೆಯನ್ನು ಆಯೋಜಿಸಲಾಗಿದೆ. ಶಶಿಕಲಾ ಕುಮಾರ್ ಮತ್ತು ತಂಡದಿಂದ ಭಕ್ತಿ ಗೀತೆ ಮತ್ತು ಸಾಯಿಬಾಬಾ ಕೀರ್ತನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಸ್ಥಳ: ದತ್ತಾತ್ರೇಯ ಸ್ವಾಮಿ ದೇವಸ್ಥಾನ , ಬೆಂಕಿನವಾಬರ ಬೀದಿ, ಮಂಡಿಮೊಹಲ್ಲಾ ಬೆಳಿಗ್ಗೆ 10.20ಕ್ಕೆ

ನೀವೂ ಕಳುಹಿಸಿ

ಮೆಟ್ರೊಗೆ ಲೇಖನ, 'ಕ್ಯಾಂಪಸ್ ಕಲರವ' ಹಾಗೂ ಕುಂದುಕೊರತೆ ಕಳುಹಿಸಲು...

ವಿಳಾಸ: ಪ್ರಜಾವಾಣಿ 'ಮೆಟ್ರೊ' ವಿಭಾಗ,
363, ಶ್ರೀಹರಿ ಕಾಂಪ್ಲೆಕ್ಸ್,
ಸೀತಾವಿಲಾಸ ರಸ್ತೆ,
ಚಾಮರಾಜಮೊಹಲ್ಲಾ,
ಮೈಸೂರು-570024
mysoremetro@
prajavani.co.in

ವಾಟ್ಸ್‌ಆ್ಯಪ್:
9513322937

ನಗೆಹನಿ

ಜವಾನ: ಏನಾಗಬೇಕಿತ್ತು ಸ್ವಾಮಿ ...?

ಅಪರಿಚಿತ ವ್ಯಕ್ತಿ: 'ನಿಮ್ಮ ಮಾಲೀಕರನ್ನು ಭೇಟಿಯಾಗಬೇಕಿತ್ತು'

ಜವಾನ: ಅವರನ್ನು ಯಾಕೆ ಭೇಟಿಯಾಗಬೇಕಿತ್ತು ..?

ಅಪರಿಚಿತ ವ್ಯಕ್ತಿ: ಅವರದೊಂದು ಬಿಲ್ಲು...!

ಜವಾನ: ಅವರು ನಿನ್ನೆಯೇ ಊರಿಗೆ ಹೋಗಿದ್ದಾರೆ.

ಅಪರಿಚಿತ: ನಾನು ಅವರಿಗೆ ಬಾಕಿ ನೀಡಬೇಕಿತ್ತು..

ಜವಾನ: ಹೌದಾ ಸಾರ್..! ಅವರು ಇವತ್ತು ಬೆಳಿಗ್ಗೆಯೇ ಹಿಂತಿರುಗಿ ಬಂದಿದ್ದಾರೆ.

****

ಅಂಗಡಿಯವ: ಹೇಳಿ ಮೇಡಂ.. ಯಾವ ತರದ ಸೀರೆ ತೋರಿಸಲಿ..?

ಮಹಿಳೆ: ಪಕ್ಕದ್ಮನೆಯವಳು ನೋಡಿ ಉರ್ಕೊಂಡು ಸಾಯ್ಬೇಕು.ಅಂತಹ ಸೀರೆ ಇದ್ದರೆ ತೋರಿಸು..

ಚಿಣ್ಣರ ಚಿತ್ತಾರ



ಹೆಬ್ಬಾಳದಲ್ಲಿರುವ ಶಿಕ್ಷಕರ್ಣಿ ಸೆಂಟ್ರಲ್ ಶಾಲೆಯ 6ನೇ ತರಗತಿಯ ವಿದ್ಯಾರ್ಥಿನಿ ಬೃಂದಾ ವಿ.ಟಿ. ಬಿಡಿಸಿದ ಚಿತ್ರ



ಕೆವಿಸಿ ಇನ್ನೊವೇಟಿವ್ ಗ್ಲೋಬಲ್ ಶಾಲೆಯ ವಿದ್ಯಾರ್ಥಿ ಆರ್. ತೇಜಸ್ ಬಿಡಿಸಿದ ಶಾಲೆಯ ಚಿತ್ರ